ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೋ-ಆಪರೇಟೀವ್ ಮೂವ್‌ಮೆಂಟ್‌ನಲ್ಲಿ ಪರಿಣಿತರಾಗಿರತಕ್ಕ ತಮ್ಮ ಕೈಗೆ ಅಧಿಕಾರ ಬಂದು ೪ ವರ್ಷಗಳಾಯಿತು. ಈ ಖಾತೆಯನ್ನು ತಾವು ತೆಗೆದು ಕೊಂಡು ೪ ವರ್ಷಗಳಾಯಿತು. ಬೇರೆಯವರದ್ದೆಲ್ಲಾ ಬದಲಾವಣೆಯಾಯಿತು. ಆದರೆ ನಿಮ್ಮ ಖಾತೆ ಮಾತ್ರ ಬದಲಾವಣೆಯಾಗಲಿಲ್ಲ. ಸರಿಯಾಗಿ ಕೆಲಸ ಮಾಡುತ್ತಿದ್ದಾರೆಂದು ಮುಖ್ಯ ಮಂತ್ರಿಗಳಿಗೆ ಗೊತ್ತಿದ್ದಿರಬಹುದು. ಇಷ್ಟಾಗಿದ್ದರೂ ಈ ಇಲಾಖೆಯಲ್ಲಿ ಸುಧಾರಣೆ ಬರುತ್ತಿಲ್ಲವಲ್ಲ ಇದಕ್ಕೆ ಕಾರಣ ವೇನು?

ಶ್ರೀ ಆರ್. ಎಲ್. ಜಾಲಪ್ಪ.—ಅದು ಬಹುಶಃ ನನ್ನ ಇನ್‌ಎಸಿಫಿಯನ್ಸಿ ಕಾರಣ ಇರಬಹುದು. ಕೆಟ್ಟು ಹೋಗಿರುವುದನ್ನೂ ಮತ್ತು ಸಂಪೂರ್ಣವಾಗಿ ಜಿಡ್ಡು ಹಿಡಿದಿರುವುದನ್ನು ಪೂರ್ತಿ ಸುಧಾರಣೆ ಮಾಡುವುದು ಸ್ವಲ್ಪ ಕಷ್ಟವಾಗುತ್ತದೆ. ಆದರೂ ನನ್ನ ಕೈಲಾದುದನ್ನು ಮಾಡಿದ್ದೇನೆ. ಜನಕ್ಕೆ ಈ ಇಲಾಖೆ ಇದೆ ಅಂತಲೇ ಗೊತ್ತಿರಲಿಲ್ಲ. ಆದರೂ ಸಹಕಾರಿ ಇಲಾಖೆಯೊಂದು ಇದೆ ಎಂಬುದನ್ನು ಜನರಿಗೆ ತೋರಿಸಿಕೊಟ್ಟಿದ್ದೇನೆ. ನೂರಾರು ಅಧಿಕಾರೇತರರ ಮೇಲೆ ಹಾಗೂ ಅಧಿಕಾರಿಗಳ ಮೇಲೆ ಕ್ರಮ ತೆಗೆದು ಕೊಂಡಿದ್ದೇನೆ. ಮೊನ್ನೆ ಕೂಡ ಡೆಪ್ಯುಟಿ ರಿಜಿಸ್ಟ್ರಾರ್ ಆಫ್ ಕೋ-ಆಪರೇಟೀವ್ ಸೊಸೈಟೀಸ್ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಂವುದಕ್ಕೆ ಆರ್ಡರ್ ಮಾಡಿ ಕಳುಹಿಸಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕಾಗಿಯೇ ನಾನಂ ಹೇಳುವುದೇನೆಂದರೆ, ಅಧಿಕಾರಿಗಳದ್ದು ಒಂದು ಕಡೆ ಇರಲಿ. ಆದರೆ ಅಧಿಕಾರೇತರರು ಯಾರ್ಯಾರು ಈ ರೀತಿ ಮಾಡಿದ್ದಾರೆ, ಅವರು ಅಧ್ಯಕ್ಷರು ಇರಬಹುದು, ಉಪಾಧ್ಯಕ್ಷರು ಇರಬಹುದು, ಅವರನ್ನೆಲ್ಲಾ ನೇಣು ಹಾಕಿದರೆ ಆಗ ಸರಿ ಹೋಗುತ್ತದೆ. ಆದರೆ ಅದನ್ನು ಬಿಟ್ಟು ಅಂತಹವರನ್ನು ಪ್ರೊಟೆಕ್ಷನ್ ಮಾಡುತ್ತಾ ಹೋದರೆ ಇದಂ ಸರಿ ಹೋಗುವುದಿಲ್ಲ. ಈ ರೀತಿಯಂ ಸಹಕಾರಿಗಳದ್ದೇ ಒಂದು ಜಾತಿ. ಅವರಿಗೆ ಪಾರ್ಟಿ ಪಕ್ಷ ಯಾವುದೂ ಇಲ್ಲ. ನೀವು ಅಂತಹವರ ವಿರುದ್ಧವಾಗಿ ಕೆಲಸ ಮಾಡಿದ್ದೇ ಆದರೆ ನಾವು ನಿಮಗೆ ಶೆಹಭಾಸ್‌ಗಿರಿ ಕೊಡುವಂತಹವರಂ.

ಶ್ರೀ ಆರ್. ವೆಂಕಟರಾಮಯ್ಯ.—ದುರುಪಯೋಗ ಮಾಡಿದಂತಹ ಸೆಕ್ರೆಟರಿಯಂ ಮೇಲೆ ಕೇಸನ್ನು ಹಾಕಬೇಕೆಂದರೂ ಕೇಸನ್ನೇ ಹಾಕುತ್ತಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಅಂತಹ ನೂರಾರು ಕೇಸುಗಳನ್ನು ಹಾಕಿದ್ದೇನೆ. ಅಂತಹವರ ಮೇಲೆ ಕ್ರಿಮಿನಲ್ ಕೇಸುಗಳನ್ನು ಹಾಕಿದರೆ, ಅವರ ಪರವಾಗಿ ವಾದ ಮಾಡುವುದಕ್ಕೆ ನಿಮ್ಮಂತಹವರಂ ಕೋರ್ಟಿಗೆ ಹೋಗಿ, ಅವರನ್ನು ಬಿಡಿಸುತ್ತಾರೆ.

## ಕಡೂರು ತಾಲ್ಲೂಕಿನಲ್ಲಿ ವಿದ್ಯಾರ್ಥಿನಿಲಯಗಳನ್ನು ತೆರೆಯುವುದು

೭೪೦ (ಅ) ಶ್ರೀ ಪಿ. ಬಿ. ಓಂಕಾರಮೂರ್ತಿ (ಕಡೂರು) ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಂವರೆ?

ಅ) ಕಡೂರು ತಾಲ್ಲೂಕಿನಲ್ಲಿ ಸುಮಾರು ೧೮ ಪ್ರೌಢ ಶಾಲೆಗಳು, ೪ ಸರ್ಕಾರಿ ಕಿರಿಯ ಕಾಲೇಜಂ ೨ ಖಾಸಗಿ ಕಿರಿಯ ಕಾಲೇಜಂ ಇದ್ದು ಬಹಳ ಕಡೆ ವಿದ್ಯಾರ್ಥಿ ನಿಲಯಗಳಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ೧೯೮೭-೮೮ನೇ ಸಾಲಿನಲ್ಲಿಯಾದರೂ ಪ್ರೌಢ ಶಾಲೆಗಳಿರುವ ಕಡೆ ವಿದ್ಯಾರ್ಥಿನಿಲಯಗಳನ್ನು ಸಾ ಪನೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಬಂದಿದೆ.

ಆ) ೧೯೮೭-೮೮ನೇ ಸಾಲಿನಲ್ಲಿ ಕಡೂರು ತಾಲ್ಲೂಕಿನ, ಹಿರೇನಲ್ಲೂರಿಗೆ ಒಂದು ಹೆಣ್ಣು ಮಕ್ಕಳ ವೆಟ್ರಿಕ್ ಪೂರ್ವನಿಲಯ, ತರಿಕೆರೆ ಮತ್ತು ಮೂಡಿಗೆರೆ ತಾಲ್ಲೂಕುಗಳಲ್ಲಿ ತಲಾ ಒಂದರಂತೆ ಗಂಡು ಮಕ್ಕಳ ಮೆಟ್ರಿಕ್ ನಂತರದ ನಿಲಯಂಗಳನ್ನು ಮಂಜೂರು ಮಾಡಿ ೧೯೮೭-೮೮ನೇ ಸಾಲಿನಿಂದ ನಡೆಸಲು ವಿಷಯಂ ಪರಿಶೀಲನೆಯಲ್ಲಿದೆ.

ಶ್ರೀ ಪಿ. ಬಿ. ಓಂಕಾರಮೂರ್ತಿ.—ತಮಗೆ ಗೊತ್ತಿರುವಂತೆ, ಚಿಕ್ಕಮಗಳೂರು ಜಿಲ್ಲೆಯಂ ಕಡೂರು ತಾಲ್ಲೂಕಿನಲ್ಲಿ ಒಟ್ಟು ೨೪ ಶಾಲಾ ಕಾಲೇಜುಗಳು ಇವೆ. ಹೈಸ್ಕೂಲುಗಳು ಇರುವಂತಹ ಜಾಗದಲ್ಲಿ ವಿದ್ಯಾರ್ಥಿನಿಲಯಗಳನ್ನು ತೆರೆಯಬೇಕೆಂದು ಕಳೆದ ೭–೮ ವರ್ಷಗಳಿಂದ ಕೇಳಿದರೂ ಈವರೆವಿಗೂ ಒಂದಕ್ಕೂ ಮಂಜೂರಾತಿ ಸಿಕ್ಕಿಲ್ಲ. ಈಗಲಾದರೂ ಅಂದರೆ ೧೯೬೭–೬೮ನೇ ಸಾಲಿನಲ್ಲಿ ಎಲ್ಲೆಲ್ಲಿ ಪ್ರೌಢ ಶಾಲೆಗಳು ಇವೆ, ಅಲ್ಲೆಲ್ಲಾ ವಿದ್ಯಾರ್ಥಿನಿಲಯಗಳನ್ನು ತೆರೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ.—ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುವುದಾದರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು ೫೬ ವಿದ್ಯಾರ್ಥಿನಿಲಯಗಳಿದ್ದು, ಅವುಗಳಲ್ಲಿ ೨೨ ವಿದ್ಯಾರ್ಥಿನಿಲಯಗಳು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮಕ್ಕಳಿಗೆ, ೨೪ ಹಿಂದುಳಿದ ವರ್ಗದವರ ಹಾಗೂ ಅಲ್ಪಸಂಖ್ಯಾತರ ಮಕ್ಕಳಿಗಾಗಿ ನಡೆಸುತ್ತಿದ್ದೇವೆ. ಮಾನ್ಯ ಸದಸ್ಯರು ಕಡೂರು ತಾಲ್ಲೂಕಿನ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಆ ತಾಲ್ಲೂಕಿನಲ್ಲಿ ಒಟ್ಟು ೧೧ ವಿದ್ಯಾರ್ಥಿನಿಲಯಗಳಿದ್ದು, ೪ ವಿದ್ಯಾರ್ಥಿನಿಲಯಗಳನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕಲ್ಯಾಣ ಇಲಾಖೆ ನಡೆಸುತ್ತಿದೆ. ಇನ್ನುಳಿದ ೭ ವಿದ್ಯಾರ್ಥಿನಿಲಯಗಳನ್ನು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ನಡೆಸುತ್ತಿದೆ. ಈ ಸಾಲಿನಲ್ಲಿ ಇರ್ಗಳ್ಳಿ ಹಾಗೂ ಇನ್ನೆರಡು ಕಡೆಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ತೆರೆಯುವ ಸಾಧ್ಯತೆ ಇದೆ.

## ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗದ ಅಭಿವೃದ್ಧಿ ನಿಗಮದಿಂದ ಧನ ಸಹಾಯ

೭೭೫ ಶ್ರೀ ಬಿ. ಜಿ. ಜಮಖಂಡಿ (ಮುಧೋಳ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

೧) ೧೯೬೫–೬೬ನೇ ಸಾಲಿನಲ್ಲಿ, ೧೯೬೬–೬೭ನೇ ಹಾಗೂ ೧೯೬೭–೬೮ನೇ ಸಾಲಿನಲ್ಲಿ ರಾಜ್ಯದ ಪರಿಶಿಷ್ಟ ಜಾತಿ ಪರಿಶಿಷ್ಟ ಜನಾಂಗದ ಅಭಿವೃದ್ಧಿ ನಿಗಮದಿಂದ ಧನ ಸಹಾಯ ಪಡೆಯಲು ಕೋರಿ ಬಂದ ಅರ್ಜಿಗಳು ಎಷ್ಟು ಮತ್ತು ಆದರಲ್ಲಿ ಎಷ್ಟು ಜನರಿಗೆ ಧನ ಸಹಾಯ ಮಾಡಲಾಯಿತು.

(ಜಿಲ್ಲಾವಾರು ಮಾಹಿತಿ ಒದಗಿಸುವುದು)

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—